# ಬಾಪ್ತಿಸ್ಮ

ಓವೆನ್ ಓಲ್‌ಬ್ರಿಕ್

# ಪೀಠಿಕೆ

*"ಆ ನೀರಿಗೆ ಅನುರೂಪವಾದ ಬಾಪ್ತಿಸ್ಮವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈ ಕೊಳೆಯನ್ನು ಹೋಗಲಾಡಿಸುವಂಥದ್ದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದ್ದೇ" (1 ಪೇತ್ರ 3:21).*

1967ರಲ್ಲಿ ಕಾರ್ಯಾಚರಣೆಯ ತಂಡವು ತರಬೇತಿಗಾಗಿ ಮಿಸ್ಸೂರಿಯ ಸ್ಪ್ರಿಂಗ್ ಫೀಲ್ಡಿಗೆ ಸಮೀಪದಲ್ಲಿ ಕ್ಯಾಂಪ್ ಹ್ಯಾಪಿ ಹೊಲ್ಲೊದಲ್ಲಿ ಕೂಡಿಬಂದಿತು. ಹಿಂದಿನ ಬೇಸಿಗೆ ಕಾಲದಲ್ಲಿ ಈಶಾನ್ಯ ಪ್ರಾಂತ್ಯಗಳಲ್ಲಿ ಜನರನ್ನು ಕ್ರಿಸ್ತನ ಬಳಿಗೆ ತರುವ ಪ್ರಯತ್ನದಲ್ಲಿ ನಾನು ಈ ಗುಂಪಿನೊಂದಿಗೆ ಕೆಲಸ ಮಾಡಿದ್ದೆನು. ಬಾಪ್ತಿಸ್ಮ ಹೊಂದಲು ಜನರ ಮನವೊಲಿಸುವಲ್ಲಿ ನಾವು ಯಶಸ್ವಿ ಯಾಗಿದ್ದೆವು. ಆದರೆ ಅವರಲ್ಲಿ ಅನೇಕರು ಕ್ರಿಸ್ತನಿಗೆ ನಂಬಿಗಸ್ಥರಾಗಿ ಉಳಿಯಲಿಲ್ಲ. ಅವರು ತಮ್ಮ ಪಾಪದ ಹಳೇ ಜೀವಿತಗಳಿಗೆ ಅಂತ್ಯ ಮಾಡಿ ಕ್ರಿಸ್ತನಿಗಾಗಿ ಹೊಸ ಜೀವಿತ ಪ್ರಾರಂಭಿಸುವಂತೆ ಪ್ರೋತ್ಸಾಹಿಸಲು ನಾವೇನು ಮಾಡಬೇಕೆಂದು ಆಶ್ಚರ್ಯ ಪಡುತ್ತಿದ್ದೆವು. ಬಾಪ್ತಿಸ್ಮ ಹೊಂದಿದವರ ಜೀವಿತಗಳು ಸಮರ್ಪಣೆಯಿಲ್ಲದೆ ಬದಲಾಗಿರಲಿಲ್ಲ ವೆಂಬುದನ್ನು ನಾವು ಅರಿತುಕೊಂಡೆವು. ಬಾಪ್ತಿಸ್ಮವು ಬರೇ ಖಾಲಿಯಾದ ಧಾರ್ಮಿಕ ಆಚರಣೆ ಯಾಗಿರುವದಿಲ್ಲ. ಆದರೆ ಅದು ಅವರಿಗೆ ನೂತನ ಜನನವಾಗಿದೆ ಎಂಬುದನ್ನು ದೃಢಪಡಿಸಲು ಬಯಸಿದೆವು.

ಬಾಪ್ತಿಸ್ಮದ ಕಡೆಗೆ ಕಡಿಮೆ ಪಕ್ಷ ಆರು ಪ್ರಮುಖ ಮನೋಭಾವನೆಗಳು ತೆಗೆದು ಕೊಳ್ಳಲ್ಪಟ್ಟಿವೆ:

ಮೊದಲನೆಯ ದೃಷ್ಟಿಕೋನವು, ಅದು ಒಂದು ಸಂಸ್ಕಾರವಾಗಿ, ಬಾಪ್ತಿಸ್ಮ ಕೊಡುವವನ ಸರಿಯಾದ ಮಾತುಗಳ ಮತ್ತು ಕಾರ್ಯಗಳನ್ನು ಅವಲಂಭಿಸಿ ಬಾಪ್ತಿಸ್ಮ ಹೊಂದುವವನನ್ನು ಅವನ ಪಾಪದಿಂದ ನೀರು ಶುದ್ಧೀಕರಿಸುತ್ತದೆ.

> ಒಂದು ಸಂಸ್ಕಾರವು ಕ್ರಿಸ್ತನಿಂದ ಪಡೆದ ಕೃಪೆಯನ್ನು ಹೊಂದಿರುವಲ್ಲಿ ಪವಿತ್ರ ವಾದದ್ದರ ಗುರುತಾಗಿದೆ. ಈ ಗುರುತು ಸಂಕೇತಿಸುವುದು ಮಾತ್ರವೇ ಅಲ್ಲ ನಿಜವಾಗಿ ಕೃಪೆಗೂ ಕಾರಣವಾಗಿರುವುದು ... ಹೀಗೆ ಸೇವಕನು ಬಾಪ್ತಿಸ್ಮಕ್ಕಾಗಿ ಅಭ್ಯರ್ಥಿಯ ಮೇಲೆ ನೀರನ್ನು ಸುರಿಯುವಾಗ ... ಸಭೆಯ ಹೆಸರಿನಲ್ಲಿ ಕಾರ್ಯ ಮಾಡುವ ಸೇವಕನ ಮಾತುಗಳಿಂದ ನೀರು ಹೀಗೆ ನಿರ್ಧರಿಸಲ್ಪಟ್ಟಿದ್ದು, ಮೂಲ ಪಾಪದ ಪುರಾತನ ಕಲಂಕವನ್ನು ತೆಗೆದು ಹಾಕಲು ಕಾರಣವಾಗುವುದು ಮತ್ತು ವ್ಯಕ್ತಿಯನ್ನು ಸಭೆಯ ಸದಸ್ಯನನ್ನಾಗಿ ಮಾಡುವುದು.[1]

ಎರಡನೆಯ ದೃಷ್ಟಿಕೋನವು, ವಿಧೇಯತೆಯ ಕಾರ್ಯವಾಗಿ, ಒಬ್ಬನು ತನ್ನ ಪಾಪಗಳಿಂದ ರಕ್ಷಿಸಲ್ಪಟ್ಟಿದ್ದಾನೆಂಬುದನ್ನು ಬಾಪ್ತಿಸ್ಮವು ತೋರಿಸುವುದು. ಬಾಪ್ತಿಸ್ಮದ ಉದ್ದೇಶವು "ರಕ್ಷಣೆಯನ್ನು ತೋರಿಸುವುದಾಗಿದೆ, ಅದನ್ನು ಪಡೆಯುವುದಕ್ಕಾಗಲ್ಲ ... ರಕ್ಷಣೆಯ ಚಿನ್ಹೆ ಇಲ್ಲವೇ ಸಂಕೇತದಿಂದ ಒಂದು ದೃಷ್ಟಾಂತವಾಗಿದೆ ... ಬಾಪ್ತಿಸ್ಮವು ರಕ್ಷಣೆಗೆ ಅವಶ್ಯವಾದದ್ದಲ್ಲ."[2]

ಅಪೊಸ್ತಲರ ಕೃತ್ಯ 2:38ನ್ನು ಕುರಿತು NIV ಸ್ಟಡಿ ಬೈಬಲಿನಲ್ಲಿ ಈ ಅಡಿ ಟಿಪ್ಪಣಿ

ಕೂಡಿಸಲ್ಪಟ್ಟಿದೆ: "ಬಾಪ್ತಿಸ್ಮವು ಕ್ಷಮಾಪಣೆಯನ್ನು ಕೊಡುವುದಿಲ್ಲ. ಆದರೆ ಬಾಪ್ತಿಸ್ಮದಿಂದ ಸಾಂಕೇತಿಕವಾಗಿ ಮಾಡಲ್ಪಟ್ಟಿದ್ದಂಥದರ ಮೂಲಕವಾಗಿ ಕ್ಷಮಾಪಣೆಯು ಬರುತ್ತದೆ."[3] ಅದೇ ಬೈಬಲಿನಲ್ಲಿ ಅಪೊಸ್ತಲರ ಕೃತ್ಯ 22:16ರ ಬಗ್ಗೆ ವ್ಯಾಖ್ಯಾನ ಮಾಡಲ್ಪಟ್ಟಿದೆ. "ಬಾಪ್ತಿಸ್ಮವು ಆಂತರಿಕ ಕೃಪೆಯ ಬಾಹ್ಯ ಸಂಕೇತವಾಗಿದೆ. ವಾಸ್ತವಿಕತೆ ಮತ್ತು ಸಂಕೇತ ಎರಡೂ ಹೊಸ ಒಡಂಬಡಿಕೆಯಲ್ಲಿ ನಿಕಟವಾಗಿ ಸಂಬಂಧಿಸಲ್ಪಟ್ಟಿವೆ."[4]

ಮೂರನೆಯ ದೃಷ್ಟಿಕೋನವು, ಕ್ರಿಸ್ತನ ಆಜ್ಞೆಯಾಗಿ, ಬಾಪ್ತಿಸ್ಮವು ಒಬ್ಬನನ್ನು ದೃಶ್ಯವಾದ ಸಭೆಯೊಳಗೆ ತರುವ ಕಾರ್ಯವಾಗಿದೆ.

> ಬಾಪ್ತಿಸ್ಮವು ಹೊಸ ಒಡಂಬಡಿಕೆಯ ಒಂದು ಸಂಸ್ಕಾರ. ಯೇಸು ಕ್ರಿಸ್ತನಿಂದ ವಿಧಿಸಲ್ಪಟ್ಟಿದೆ. ದೃಶ್ಯ ಸಭೆಯೊಳಗೆ ಬಾಪ್ತಿಸ್ಮ ಹೊಂದುವವನು ಗಂಭೀರವಾಗಿ ಸ್ವೀಕರಿಸಿಕೊಳ್ಳುವದಕ್ಕಾಗಿ ಮಾತ್ರವಲ್ಲದೇ ಅವರಿಗೆ ಕೃಪೆಯ ಒಡಂಬಡಿಕೆಯ ಮುದ್ರೆಯೂ ಸಂಕೇತವೂ ಆಗಿರಲು, ಕ್ರಿಸ್ತನಲ್ಲಿ ಅವನು ಕಸಿ ಮಾಡಲ್ಪಡುವದಕ್ಕಾಗಿಯೂ, ಪುನರುಜೀವನಕ್ಕಾಗಿಯೂ, ಪಾಪಗಳ ಪರಿಹಾರಕ್ಕಾಗಿಯೂ ಮತ್ತು ಯೇಸುಕ್ರಿಸ್ತನ ಮುಖಾಂತರ ದೇವರಿಗೆ ಸಮರ್ಪಿಸುವದಕ್ಕಾಗಿಯೂ ನೂತನ ಜೀವನದಲ್ಲಿ ನಡೆಯುವದಕ್ಕಾಗಿಯೂ ಇರುವುದು.[5]

ನಾಲ್ಕನೆಯ ದೃಷ್ಟಿಕೋನವು, ಒಂದು ಧರ್ಮಾಚರಣೆಯಾಗಿ, ಬಾಪ್ತಿಸ್ಮವು ಒಬ್ಬ ಪ್ರೌಢನನ್ನು ಇಲ್ಲವೇ ಒಂದು ಶಿಶುವನ್ನು (ಅದಕ್ಕೆ ನಾಮಕರಣ ಮಾಡುವಾಗ) ಕರ್ತನಿಗೆ ಪ್ರತಿಷ್ಠಿಸುವ ಆಚಾರ ವಿಧಿಯಾಗಿದೆ ಮತ್ತು ಕರ್ತನಿಗಾಗಿ ಮಗುವನ್ನು ಬೆಳಸಲು ಶಿಶುವಿನ ತಂದೆತಾಯಿಗಳ ಪ್ರತಿಷ್ಠೆಯನ್ನು ಒಳಗೊಂಡಿರುತ್ತದೆ.

> ಬಾಪ್ತಿಸ್ಮವು, ಹೊಸ ಒಡಂಬಡಿಕೆಯ ಸಂಕೇತವಾಗಿದ್ದು, ಅವಶ್ಯವಿದ್ದ ಕ್ರೈಸ್ತ ತರಬೇತಿ ಕೊಡುವ, ಭರವಸೆ ಕೊಡುವ ತಂದೆತಾಯಿಗಳ ಇಲ್ಲವೆ ಪೋಷಕರ ಚಿನ್ನಹದಂತೆ ಚಿಕ್ಕ ಮಕ್ಕಳಿಗೆ ಬಾಪ್ತಿಸ್ಮ ಕೊಡಬಹುದು.[6]
>
> ಹಾಗಾದರೆ, ಕ್ರೈಸ್ತ ಬಾಪ್ತಿಸ್ಮವು ಏನನ್ನು ಸೂಚಿಸುತ್ತದೆ? ಒಬ್ಬನ ಪಾಪಗಳನ್ನು ತೆಗೆದು ಹಾಕುವುದಾಗಿರುವದಿಲ್ಲ. ಯಾಕಂದರೆ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಮಾತ್ರವೇ ಪಾಪದಿಂದ ಶುದ್ಧೀಕರಣ ಬರುತ್ತದೆ (ಎಫೆಸ 1:7). ಬಾಪ್ತಿಸ್ಮವು ಒಬ್ಬನು ಯೆಹೋವ ದೇವರಿಗೆ ಗಂಭಿರವಾದ ಪ್ರತಿಷ್ಠೆಯನ್ನು ಮಾಡಿಕೊಂಡಿದ್ದಾನೆ ಮತ್ತು ಆತನ ಚಿತ್ತವನ್ನು ಮಾಡಲು ತನ್ನನ್ನು ಒಪ್ಪಿಸಿಕೊಟ್ಟಿದ್ದಾನೆ ಎಂದು ಸಾಕ್ಷಿಕೊಡುತ್ತಾ ಬಹಿರಂಗವಾಗಿ ಪ್ರಕಟಿಸುವುದಾಗಿದೆ.[7]

ಐದನೆಯ ದೃಷ್ಟಿಕೋನವು, ದೇವರಿಗೆ ವಿಧೇಯತೆಯಲ್ಲಿ ನಂಬಿಕೆಯ ಒಂದು ಕಾರ್ಯವಾಗಿ, ಬಾಪ್ತಿಸ್ಮವು ಪಾಪಗಳ ಕ್ಷಮಾಪಣೆಯನ್ನೂ, ಬಾಪ್ತಿಸ್ಮವನ್ನು ಕುರಿತು ದೇವರಿಂದ ವಾಗ್ದಾನಮಾಡಲ್ಪಟ್ಟ ಎಲ್ಲಾ ಇತರ ಲಾಭಗಳನ್ನೂ ತರುತ್ತದೆ. ಬಾಪ್ತಿಸ್ಮ ಹೊಂದುವವನಿಗೆ ಅದರ ಉದ್ದೇಶವು ತಿಳಿದಿರಬಹುದು, ತಿಳಿಯದೇ ಇರಬಹುದು.

> … ಆ ವ್ಯಕ್ತಿಯು ಕ್ಷಮಾಪಣದ ಬಗ್ಗೆ ಅಜ್ಞಾನಿಯಾಗಿದ್ದರೂ ಅವನ ಬಾಪ್ತಿಸ್ಮವು ಬೈಬಲಿಗೆ ಸುಗುಣವಾದದ್ದೆಂದು ತಿಳಿಯಲ್ಪಡಬೇಕು. ಆದುದರಿಂದ ಬಾಪ್ತಿಸ್ಮದ ಸಮಯದಲ್ಲಿ ಒಬ್ಬನು "ಪಾಪಗಳ ನಿವಾರಣೆಗಾಗಿ" ಸ್ಪಷ್ಟವಾದ ಅರ್ಥವನ್ನು

ಅರಿತು ಕೊಳ್ಳಬೇಕೆಂಬ ತತ್ವವು ಸರಿಯಾದದ್ದಾಗಿರುವದಿಲ್ಲ.[8]

(ಅಲೆಕ್ಸಾಂಡರ್) ಕ್ಯಾಂಪಬೆಲ್ ಅವರು ಯಾವಾಗಲೂ ಈ ವಿಧಾನದ ಬಗ್ಗೆ ಇರುವವೆಂಬ ಹುರುಳಿಲ್ಲದ ಸಂಗತಿಗಳ ಮೇಲಿನಿಂದ ಮುಳುಗೇಳಿಸುವ ಪದ್ಧತಿಯನ್ನು ಸಂಪೂರ್ಣವಾಗಿ ವಿರೋಧಿಸಿದರು. ವಿಧಾನದ ಲಕ್ಷಣ ಹಾಗೂ ರೂಪವನ್ನು ಕುರಿತು ಬಾಪ್ತಿಸ್ಮ ಹೊಂದಿದವನಿಗೆ ತಿಳಿಸಲ್ಪಡದಿದ್ದರೂ ಕ್ರಿಸ್ತನಲ್ಲಿ ಯಥಾರ್ಥವಾದ ನಂಬಿಕೆಯಿರುವಲ್ಲಿ ಎಲ್ಲಾ ಆಚರಣೆಗಳು ಅಧಿಕೃತವಾದವುಗಳೆಂದು ನಂಬಿದ್ದರು. ವೈಯಕ್ತಿಕ ವ್ಯಕ್ತಿಯ ಪರವಾಗಿ ಅವನ ಮೊದಲನೆಯ ಬಾಪ್ತಿಸ್ಮದಲ್ಲಿ ಅವನು ಕ್ರಿಸ್ತನಲ್ಲಿ ನಂಬಿಕೆಯ ಆಧಾರವಿಲ್ಲದವನಾಗಿದ್ದ ನೆಂಬುದನ್ನು ಬಿಟ್ಟರೆ, ಬೇರೆ ಯಾವುದೂ ಪುನಃ ಬಾಪ್ತಿಸ್ಮ ಹೊಂದುವದನ್ನು ನ್ಯಾಯಬದ್ಧವಾಗಿ ಮಾಡುವದಿಲ್ಲ ಎಂದು ಯೋಚಿಸಿದರು.[9]

ಮುಳುಗೇಳಿಸಲ್ಪಡವಿಕೆಯು ಮುಳುಗೇಳಿಸಲ್ಪಡುವವರಿಗೆ ಆಶೀರ್ವಾದ ವಾಗ್ದಾನವು ಕೊಡಲ್ಪಟ್ಟಿದೆ ಎಂದರ್ಥವಾಗುತ್ತದೆ. ಅದು ಬಾಪ್ತಿಸ್ಮ ಕೊಡುವವನ ಇಲ್ಲವೇ ಹೊಂದುವವನ ಕಾರ್ಯವನ್ನು ಹೊಂದಿರುವದಿಲ್ಲ. ಅದು ಮನುಷ್ಯನಿಗಲ್ಲ ಆದರೆ ದೇವರಿಗೆ ಒಳಪಟ್ಟಿರುತ್ತದೆ. ಕೆಲವೊಂದು ಶರತ್ತುಗಳ ಮೇಲೆ ಅದನ್ನು ವಾಗ್ದಾನ ಮಾಡಿ, ಆ ಶರತ್ತುಗಳು ಪೂರೈಸಲ್ಪಟ್ಟಾಗ, ಆತನು ತನ್ನ ವಾಕ್ಯದಂತೇ ಒಳ್ಳೆಯವನಾಗಿರುವನು ಹಾಗೂ ನಾನು ಅದಕ್ಕೆ ಅರ್ಹನು ಎಂಬುದು ನನಗೆ ತಿಳಿಯದ ಕಾರಣದಿಂದ ಮಾತ್ರವೇ ಆತನು ಅದನ್ನು ಹಿಡಿದಿಟ್ಟುಕೊಳ್ಳುವನೆಂದು ತಿಳಿಯುವುದು ಕಾರಣವಿಲ್ಲದ್ದಾಗಿದೆ. ಆದುದರಿಂದ ಒಬ್ಬ ಮನುಷ್ಯನು ವಾಗ್ದಾನದ ತಿಳುವಳಿಕೆಯು ಅದರ ನೆರವೇರುವಿಕೆಯು ಶರತ್ತಾಗಿದೆಯೆಂದು ಕಂಡು ಬಂದರೇ ಮಾತ್ರ ವಾಗ್ದಾನದ ಅರುಹು ಇಲ್ಲದವನು ಆಶೀರ್ವಾದವನ್ನು ಕಳೆದುಕೊಳ್ಳುವದಿಲ್ಲ. ಇದು ಹೊಸ ಒಡಂಬಡಿಕೆಯ ಯಾವುದೇ ವಾಚಕನಿಂದ ನಿಶ್ಚಯವಾಗಿ ತಿಳಿಯಲ್ಪಡುವದಿಲ್ಲ.[10]

ಅರನೆಯ ದೃಷ್ಟಿಕೋನವು, ಈ ಅಧ್ಯಯನದಲ್ಲಿ ಪರೀಕ್ಷಿಸಲ್ಪಟ್ಟಿದೆ. ಪಾಠಗಳ ಈ ಸರಣಿಯ ಉದ್ದೇಶವು ಬಾಪ್ತಿಸ್ಮವನ್ನು ದೇವರಿಗೆ ಪರಿಶುದ್ಧ ಬರಹದ ಉತ್ತರದಂತೆ ಪರೀಕ್ಷಿಸುವುದಾಗಿದೆ. ಬಾಪ್ತಿಸ್ಮದಲ್ಲಿ ಯೇಸು ಕ್ರಿಸ್ತನು, ಕರ್ತನು, ರಕ್ಷಕನು ಮತ್ತು ದೇವರ ಕುಮಾರನು ಆಗಿರುವನೆಂದು ನಂಬುವವನು (ಯೋಹಾನ 3:16; ಅಪೊಸ್ತಲರ ಕೃತ್ಯ 2:36) ಮತ್ತು ತನ್ನ ಪಾಪಗಳಿಂದ ತನ್ನನ್ನು ಕ್ಷಮಿಸಲು ಆತನ ರಕ್ತದಲ್ಲಿ ನಂಬಿಕೆಯಿರುವವನು (ರೋಮಾಪುರ 3:25) ಯೇಸುವನ್ನು ಧರಿಸಿ ಕೊಳ್ಳಲು (ಗಲಾತ್ಯ 3:27) ಮತ್ತು ತನ್ನ ಪಾಪಗಳಿಂದ ಕ್ಷಮಿಸಲ್ಪಡಲು (ಅಪೊಸ್ತಲರ ಕೃತ್ಯ 2:38) ತನ್ನನ್ನು ನೂತನ ಜೀವನಕ್ಕೆ ಸಮರ್ಪಿಸಿಕೊಳ್ಳತಕ್ಕದ್ದು (ರೋಮಾಪುರ 6:4). ಹೀಗೆ ಅವನು ಕ್ಷಮಿಸಲ್ಪಡುವನು. ಹೊಸದಾಗಿ ಹುಟ್ಟುವವನು ಮತ್ತು ದೇವರ ರಾಜ್ಯದಲ್ಲಿ (ಯೋಹಾನ 3:5), ಕ್ರಿಸ್ತನ ದೇಹದಲ್ಲಿ (1 ಕೊರಿಂಥ 12:13) ಅಂದರೆ ಆತನ ಸಭೆಯಲ್ಲಿ (ಎಫೆಸ 1:22, 23) ಪ್ರವೇಶಿಸುವನು.

## ಮುಕ್ತಾಯ

ಕೆಲವು ಭಿನ್ನತೆಗಳೊಂದಿಗೆ ಬಾಪ್ತಿಸ್ಮದ ಕಡೆಗೆ ಅನೇಕ ಗುಂಪುಗಳು, ವ್ಯಕ್ತಿಗಳು ಇಟ್ಟುಕೊಂಡಿರುವ ಪ್ರಮುಖ ಮನೋಭಾವನೆಗಳಾಗಿವೆ. ಈ ಮನೋಭಾವನೆಗಳು

ಒಂದರ ಮೇಲೊಂದು ಇದ್ದು, ಕೆಲವು ಒಂದಕ್ಕೊಂದು ವಿರೋಧವಾದವುಗಳಾಗಿವೆ.

ಈ ಅಧ್ಯಯನದ ಭಾರವು ಬಾಪ್ತಿಸ್ಮ ಹೊಂದಿದ ವ್ಯಕ್ತಿಯಿಂದ ಯೇಸು ಏನನ್ನು ಕೇಳುತ್ತಾನೆಂಬುದು ನಿರ್ಧರಿಸುವುದಾಗಿದೆ. ನೀರಿನ ಬಾಪ್ತಿಸ್ಮಕ್ಕೆ ಪಾಪಗಳನ್ನು ಕ್ಷಮಿಸುವ ಶಕ್ತಿ ಇರುವುದೋ? ಬಾಪ್ತಿಸ್ಮವು ಆಂತರಿಕ ಕೃಪೆಯ ಬಾಹ್ಯ ಸಂಕೇತವಾಗಿದ್ದು ಒಬ್ಬನು ರಕ್ಷಿಸಲ್ಪಟ್ಟನೆಂದು ತೋರಿಸುವುದೋ? ಅದು ಸಮರ್ಪಣೆಯ ಸಂಕೇತವಾಗಿದೆಯೋ ಇಲ್ಲವೇ ಜನರನ್ನು ಸಭಾಪಂಗಡದೊಳಗೆ ಪ್ರವೇಶ ಕೊಡುವ ಕಾರ್ಯವಾಗಿದೆಯೋ, ಬಾಪ್ತಿಸ್ಮ ಹೊಂದುವ ವ್ಯಕ್ತಿಯು ಬಾಪ್ತಿಸ್ಮದ ಉದ್ದೇಶವನ್ನೂ ಅರ್ಥವನ್ನೂ ತಿಳಿಯದಿದ್ದರೆ ಅಥವಾ ಅವನಿಂದ ನೀರೀಕ್ಷಿಸಲ್ಪಡುವ ಸಮರ್ಪಣೆಯನ್ನು ಅರ್ಥ ಮಾಡಿಕೊಳ್ಳದಿದ್ದರೆ ಬಾಪ್ತಿಸ್ಮವು ಯೋಗ್ಯವಾದದ್ದು ಆಗುವುದೋ? ದೇವರ ಮಗನಾಗಲು ಹುಡುಕುತ್ತಿರುವವನಿಂದ ದೇವರು ಅರ್ಥವಿಲ್ಲದ ಧರ್ಮಾಚರಣೆಯನ್ನು ಕೇಳುವನೋ? ಹೃದಯದಿಂದ ಪ್ರತಿಕ್ರಿಯೆಯಿಲ್ಲದ ಮತ್ತು ಅದರ ಉದ್ದೇಶವನ್ನೂ ಅರ್ಥವನ್ನೂ ತಿಳಿಯದ ಮನುಷ್ಯನೊಂದಿಗೆ ತನ್ನ ಸಂಬಂಧವನ್ನು ಒಳಗೊಂಡ ಮನುಷ್ಯನ ಪರವಾಗಿ ಒಂದು ಕಾರ್ಯವನ್ನು ದೇವರು ಎಂದಾದರೂ ಕೇಳಿದ್ದಾನೋ? ಒಬ್ಬನು ಬಾಪ್ತಿಸ್ಮ ಹೊಂದುತ್ತಿರುವಾಗ ಹೊಸದಾಗಿ ಹುಟ್ಟುವದಕ್ಕೆ ತನ್ನನ್ನು ಸಮರ್ಪಿಸಿಕೊಳ್ಳ ಬಹುದೋ? ಬಾಪ್ತಿಸ್ಮದೊಂದಿಗೆ ದೇವರಿಗೆ ಸಂಬಂಧಿಸಿದ ಅರ್ಥದ ಬೆಳಕಿನಲ್ಲಿ ಒಬ್ಬನು ಬಾಪ್ತಿಸ್ಮವನ್ನು ಸ್ವೀಕರಿಸಬೇಕೋ?

ದೇವರು ಅವರೊಂದಿಗೆ ಸಂಬಂಧಿಸಿದ ಅರ್ಥವನ್ನು ಹೊರತು ಪಡಿಸಿ ಯಾವುದೇ ಅರ್ಥವಿಲ್ಲದ ದೈಹಿಕ ಕಾರ್ಯದಲ್ಲಿ ಒಬ್ಬ ವ್ಯಕ್ತಿಯು ತೊಡಗುವದಕ್ಕೆ ದೇವರು ಏನು ಕೇಳುವನು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾದರೆ ಈ ಪ್ರಶ್ನೆಗಳು ಉತ್ತರಿಸಲ್ಪಡತಕ್ಕದ್ದು ಉತ್ತರ ಕಂಡು ಕೊಳ್ಳುವದಕ್ಕೆ ಒಂದೇ ಮಾರ್ಗವು ಬೈಬಲಿನಲ್ಲಿ ಪರೀಕ್ಷಿಸುವುದು ಮತ್ತು ದೇವರು ತಾನೇ ಮಾತಾಡುವಂತೆ ಬಿಡುವುದು ಆಗಿದೆ.

---

ಟಿಪ್ಪಣೆಗಳು

[1]Paul H. Hallett, *What is a Catholic?* (New York: Macmillan Co., 1955), 125. [2]Joe T. Odle, *Church Member's Handbook* (Nashville: Broadman Press, 1962), 22. [3]Kenneth Barker, ed., *The NIV Study Bible* (Grand Rapids, Mich.: Zondervan, 1985), 1648. [4]Ibid., 1690. [5]Westminster Confession, Chapter XXVIII, Article I, *The Constitution of the Reformed Presbyterian Church of America* (Philadelphia: Synod of Reformed Presbyterian Churches, 1949), 48. [6]*Manual*, 4th ed. (Kansas City: Nazarene Publishing House, 1923), 26. [7]*The Truth That Leads to Eternal Life* (New York: Watchtower Bible and Tract Society, 1968), 183. [8]Jimmy Allen, *Rebaptism?* (West Monroe, La.: Howard Publishing Co., 1991), 48. [9]Robert Richardson, *Memoirs of Alexander Campbell,* vol. 2 (Philadelphia: J. B. Lippincott, 1868-70; reprint, Indianapolis, Ind.: Religious Book Service, 1976), 443-44, quoted in Allen, 84. [10]J. W. McGarvey, "What Is a Valid Immersion?" *The Amercian Christian Quarterly Review,* 1862, quoted in Allen, 94.

© 2009 Truth for Today